ವಿರೋಧ ಮಾಡಿದ್ದೆವು. ನಾನೇನು ಹೇಳುತ್ತೇನೆ ಎಂದರೆ, ಕೆಲವೊಂದು ಆ್ಯಕ್ಟ್‌ಗಳಿಗೆ ತಿದ್ದುಪಡಿ ಮಾಡಬೇಕಾಗುತ್ತದೆ ಎನ್ನುವುದಾದರೆ, ಅವುಗಳನ್ನು ತೆಗೆದುಕೊಂಡು ಬನ್ನಿ. secretary ಗಳಿಗೆ ಲೋಡ್ ಕಡಿಮೆ ಮಾಡಬೇಕೆಂದರೆ DC ಗಳಿಗೆ ಹೆಚ್ಚು ಪವರ್ಸ್ ಕೊಡಿ. ಆಗ Divisional Commissioners posts ಅಗತ್ಯವೇ ಇರುವುದಿಲ್ಲ. ಇದೊಂದು ಹೋಗಲಿ. ಇವರಲ್ಲದೆ Joint Directors ಗಳೆಂದು ಇದ್ದಾರೆ. ಅವರಿಗೆ supervision ಕೆಲಸವೆಂದು ಕೊಟ್ಟಿರುತ್ತೀರಿ. ಅವರೇನು supervision ಕೆಲಸ ಮಾಡುತ್ತಾರೆ? ಅವರು efficience ಏನಾದರೂ improve ಮಾಡುತ್ತಾರಾ? ಅವರಿಂದ supervision ಆಗುತ್ತಿದೆಯೇ? ಇದರಿಂದ ಭ್ರಷ್ಟಾಚಾರ ಕಡಿಮೆಯಾಗುತ್ತಿದೆಯೇ? ಏನೂ ಆಗುತ್ತಿಲ್ಲ, ಇನ್ನೂ ಜಾಸ್ತಿಯಾಗುತ್ತಿದೆ. ಅದೇ ತರಹ ಇದೂ ಕೂಡ ಆಗುತ್ತದೆ. ಆದ್ದರಿಂದ ನಾವೇನು ಹೇಳುತ್ತೇವೆ ಎಂದರೆ, ಅನುಪಯುಕ್ತವಾಗಿರತಕ್ಕಂಥ ಹುದ್ದೆಗಳನ್ನು ರದ್ದು ಮಾಡುವುದು, watseful expenditure ಅನ್ನು cut down ಮಾಡುವುದು, ಈ ಕಾರಣದಿಂದ ನಾವು ಹೇಳಿದ್ದೇವೆಯೇ ಹೊರತು ಇದರಲ್ಲಿ ಪ್ರತಿಷ್ಠೆ ಇಲ್ಲ, ಎಂಥಾದ್ದೂ ಇಲ್ಲ. ನೀವು ಇದನ್ನು consider ಮಾಡಿ. ನಾವು ಪಾಸ್ ಮಾಡಿಕೊಳ್ಳುತ್ತೇವೆ ಎಂದರೆ ಪಾಸ್ ಮಾಡಿಕೊಳ್ಳಿ.

(ಗೊಂದಲ)

ಶ್ರೀ ಕೆ.ಆರ್. ರಮೇಶ್‌ಕುಮಾರ್ :– ಈ ಸರ್ಕಾರ ಈ ಬಿಲ್ ಅನ್ನು ಪಾಸ್ ಮಾಡಿಸಿಕೊಳ್ಳಬೇಕೆಂಬ ನಿರ್ಧಾರಕ್ಕೆ ಬಂದಿದೆ. ಇವರಿಗೆ ಜನರ ಭಾವನೆಗಳಿಗೆ ಸ್ಪಂದಿಸತಕ್ಕಂಥ ಮನಸ್ಸು ಅಥವಾ ಆಲೋಚನೆಗಳಿಲ್ಲ. ಇವರು ತಮ್ಮ ವಿವೇಚನೆಯನ್ನು ಸಂಪೂರ್ಣವಾಗಿ ಕಳೆದುಕೊಂಡಿದ್ದಾರೆ. ಇದು ಜನರ ಹಿತಕ್ಕೆ ಯಾವುದೇ ರೀತಿಯಲ್ಲಿ ಸಂಬಂಧಿಸಿಲ್ಲ. ಇದನ್ನು ತಪ್ಪಿಸಿ, ಈ ಹಣವನ್ನು ಉಳಿಸಿ, ಅದನ್ನು ಯೋಗ್ಯ ಕೆಲಸಗಳಿಗೆ ಬಳಕೆ ಮಾಡಿಕೊಳ್ಳಬಹುದಾಗಿತ್ತು. ನಮ್ಮ ಯಾವುದೇ ಭಾವನೆಗಳನ್ನು ಈ ಸರ್ಕಾರ ಗೌರವಿಸದಿರುವುದರಿಂದ, ಸರ್ಕಾರದ ಈ ಮೊಂಡುತನದ ವಿರುದ್ಧ ಪ್ರತಿಭಟಿಸಿ ನಾವು ಹೊರಗೆ ಹೋಗುತ್ತೇವೆ.

[ಈ ಹಂತದಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಸದಸ್ಯರೆಲ್ಲರೂ ಸಭಾತ್ಯಾಗ ಮಾಡಿದರು]

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ :– ಮಾನ್ಯ ಉಪಾಧ್ಯಕ್ಷರೆ, ಶಾಸನ ಸಭೆಯ ಯಾವುದೇ ಮಾತಿಗೂ ಮಾನ್ಯತೆ ನೀಡದ ರೀತಿಯಲ್ಲಿ ಮಂತ್ರಿಗಳು ವರ್ತಿಸುವುದು, ಯಾರೋ ಕುಳಿತುಕೊಂಡು ಹೇಳಿದ್ದನ್ನು ಇಲ್ಲಿ ನಾವು ಪಾಸ್ ಮಾಡಿಕೊಂಡು ಹೋಗುತ್ತೇವೆ ಎನ್ನುವುದು

ಸರಿಯಲ್ಲ. ನಿಮ್ಮ ಪಾರ್ಟಿ ಎಂ.ಎಲ್.ಎ.ಗಳೇ ಇದಕ್ಕೆ ಇಲ್ಲಿ ವಿರೋಧ ಮಾಡಿದ್ದಾರೆ. ಅದಕ್ಕೂ ನೀವು ಬೆಲೆ ಕೊಡುವುದಿಲ್ಲ ಎನ್ನುವಂತಹ ಚರ್ಚೆಯಲ್ಲಿ ಭಾಗವಹಿಸಲಿಕ್ಕೆ ನಮಗೂ ಇಚ್ಛೆಯಿಲ್ಲ. ಇದನ್ನು ವಿರೋಧಿಸಿ ಸಭಾತ್ಯಾಗ ಮಾಡುತ್ತಿದ್ದೇನೆ.

(ಗೊಂದಲ)

[ಈ ಹಂತದಲ್ಲಿ ಮಾನ್ಯ ಸದಸ್ಯರಾದ ಕೆ.ಸಿ.ಮಾಧುಸ್ವಾಮಿಯವರು ಸಭಾತ್ಯಾಗ ಮಾಡಿದರು]

(ಗೊಂದಲ)

ಶ್ರೀ ಜಯಪ್ರಕಾಶ್ ಹೆಗ್ಡೆ :– ಆಡಳಿತ ಪಕ್ಷದ ಎಂ.ಎಲ್.ಎ.ಗಳೇ ವಿರೋಧ ಮಾಡಿದರೂ, ಅದನ್ನಾದರೂ ಸರ್ಕಾರ ಗಣನೆಗೆ ತೆಗೆದುಕೊಳ್ಳದಿರುವುದನ್ನು ಪ್ರತಿಭಟಿಸಿ ನಾನೂ ಸಭಾತ್ಯಾಗ ಮಾಡುತ್ತೇನೆ.

(ಗೊಂದಲ)

[ಈ ಹಂತದಲ್ಲಿ ಮಾನ್ಯ ಸದಸ್ಯರಾದ ಜಯಪ್ರಕಾಶ್ ಹೆಗ್ಡೆಯವರು ಸಭಾತ್ಯಾಗ ಮಾಡಿದರು]

(ಗೊಂದಲ)

ಉಪಾಧ್ಯಕ್ಷರು :– ಪ್ರಸ್ತಾವ ಏನೆಂದರೆ,

" 2007 ರ ಕರ್ನಾಟಕ ಭೂ ಕಂದಾಯ ಮತ್ತು ಇತರ ಕೆಲವು ಕಾನೂನುಗಳು (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 24 ರವರೆಗೆ

ಉಪಾಧ್ಯಕ್ಷರು :– ಪ್ರಸ್ತಾವ ಏನೆಂದರೆ,

'ಖಂಡ 2 ರಿಂದ 24 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ'